## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\2050\2021\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 30/06/2022

ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಫಿರ್ಯಾದಿದಾರರಾದ ಶ್ರೀ.ರಾಮೇಗೌಡ ತಂದೆ: ಬೋರೇಗೌಡ ಉರುಫ್ ಎ.ಪುಟ್ಟೇಗೌಡ, ಚಿಕ್ಕಮರಳಿ ಗ್ರಾಮ, ಕಸಬಾ ಹೋಬಳಿ, ಹಿರೇಮರಳಿ ಅಂಚೆ, ಪಾಂಡವಪುರ ತಾಲ್ಲೂಕ್, ಮಂಡ್ಯ ಜಿಲ್ಲೆ ಇವರ ದೂರನ್ನು ಪರಿಹರಿಸುವ ಬಗ್ಗೆ.

*********

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕ್, ಕಸಬಾ ಹೋಬಳಿ, ಹಿರೇಮರಳಿ ಅಂಚೆ, ಚಿಕ್ಕಮರಳಿ ಗ್ರಾಮದ ನಿವಾಸಿಯಾದ ಶ್ರೀ.ರಾಮೇಗೌಡ ತಂದೆ:ಬೋರೆಗೌಡ ಉರುಫ್ ಎ.ಪುಟ್ಟೇಗೌಡ (ಇನ್ನು ಮುಂದೆ, 'ಫಿರ್ಯಾದಿದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ಬಸವಣ್ಣ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂರ್ಗಹಳ್ಳಿ ಗ್ರಾಮ ಪಂಚಾಯತ್, ಮೈಸೂರು ತಾಲ್ಲೂಕ್ (ಪ್ರಸ್ತುತ ಕಸುವಿನಹಳ್ಳಿ ಗ್ರಾಮ ಪಂಚಾಯತ್, ನಂಜನಗೂಡು ತಾಲ್ಲೂಕ್), ಮೈಸೂರು ಜಿಲ್ಲೆ (ಇನ್ನು ಮುಂದೆ, ಕ್ರಮವಾಗಿ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಮೈಸೂರು ತಾಲ್ಲೂಕು ಇಲವಾಲ ಹೋಬಳ ಕೂರ್ಗಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಕೂರ್ಗಹಳ್ಳಿ ಬಡಾವಣೆ ನಿವೇಶನ ಸಂಖ್ಯೆ:91ರ ಕ್ರಯ ಪತ್ರದಂತೆ ನಿವೇಶನದ ಖಾತಾ ಬದಲಾವಣೆ ಕೋರಿ ಫಿರ್ಯಾದಿದಾಗರು ದಿನಾಂಕ:26/06/2019ರಂದು ಅರ್ಜಿ ಸಲ್ಲಿಸಿದ್ದರೂ ಈವರೆಗೂ ತಮ್ಮ ಹೆಸರಿಗೆ ಎದುರುದಾರರು ಖಾತೆ ಬದಲಾವಣೆ ಮಾಡಿಲ್ಲವೆಂದು ಆಪಾದಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳಲಾಗಿದೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ದಿನಾಂಕ:04/01/2022ರ ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ. ಸದರಿ ಆಕ್ಷೇಪಣೆಯ ವಿವರವು ಈ ಕೆಳಗಿನಂತೆ ಇರುತ್ತದೆ -

ಕರ್ನಾಟಕ ರಾಜ್ಯ ಕಂದಾಯ ಇಲಾಖೆಯ ನೌಕರರ ಸಂಘದಿಂದ ಕ್ರಯಪತ್ರದ ಮೂಲಕ ಪಡೆದಿರುವ ಆಸ್ತಿಗೆ ಸಂಬಂಧಿಸಿದಂತೆ ಫಿರ್ಯಾದಿದಾರರು ಖಾತೆ ಬದಲಾವಣೆ ಕೋರಿ ದಿನಾಂಕ:26/06/2019ರಂದು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಪರಿಶೀಲಿಸಲಾಗಿರುತ್ತದೆ. ಸದರಿ ಅರ್ಜಿಗೆ ಲಗತ್ತಿಸಿದ ಮುಚ್ಚಳಿಕೆ ಪತ್ರದಲ್ಲಿ ಆಸ್ತಿ ನಂಬರ್ ಮತ್ತು ನಿವೇಶನ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ಅದೇ ರೀತಿ, ಸದರಿ ಅರ್ಜಿಯೊಂದಿಗೆ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಅನುಮೋದನೆ ನೀಡಿರುವ ಬಡಾವಣೆಯ ನಕ್ಷೆಯನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿ, ಫಿರ್ಯಾದಿದಾರರಿಗೆ ನಿವೇಶನ ಮಂಜೂರಾದ ಪತ್ರದಲ್ಲಿ ಕಂದಾಯ ಇಲಾಖೆಯ ನೌಕರರ ಸಂಘದ ಕಾರ್ಯದರ್ಶಿಗಳ ಸಹಿ ಮತ್ತು ಮೊಹರು ಇರುವುದಿಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ಫಿರ್ಯಾದಿದಾರರ ಮೊಬೈಲ್ ಮೂಲಕ ಸಂಪರ್ಕಿಸಿ ತಿಳಿಸಲು ಪ್ರಯತ್ನಪಟ್ಟಿರುವಾಗ ಸದರಿ ಮೊಬೈಲ್ ನಂಬರ್ ರಾಂಗ್ ನಂಬರ್ ಇರುವ ಬಗ್ಗೆ ತಿಳಿದು ಬಂದಿರುತ್ತದೆ. ಫಿರ್ಯಾದಿದಾರರು ಖಾತೆ ಬದಲಾವಣೆಗೆ ಕೋರಿದ ನಿವೇಶನದ ಬಡಾವಣೆಯು ಅನ್ಯಕ್ರಾಂತ ಆಗಿರುವ ಬಗ್ಗೆ ಆದೇಶ, ನಕ್ಷೆ, ಅನುಮೋದನೆ, ನಿವೇಶನಗಳ ಬಿಡುಗಡೆ ಪ್ರಮಾಣ ಪತ್ರ ವಗೈರೆ ಇರುವುದಿಲ್ಲ. ಈ ಎಲ್ಲಾ ದಾಖಲೆಗಳನ್ನು ಸಲ್ಲಿಸುವಂತೆ ಫಿರ್ಯಾದಿದಾರರಿಗೆ ದಿನಾಂಕ:10/07/2020 ರಂದು ಹಿಂಬರಹ ನೀಡಲಾಗಿರುತ್ತದೆ. ಆದರೆ, ಫಿರ್ಯಾದಿದಾರರು ಯಾವುದೇ ದಾಖಲೆ ಮತ್ತು ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಫಿರ್ಯಾದಿದಾರರ ಅರ್ಜಿಯ ಮೇಲೆ ಯಾವುದೇ ಕ್ರಮ ಜರುಗಿಸಲು ಸಾಧ್ಯವಾಗಿರುವುದಿಲ್ಲ. ಅದೇ ರೀತಿ, ಫಿರ್ಯಾದಿದಾರರು ಖಾತೆ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ ಅವಧಿಯಲ್ಲಿಯೇ ಕರ್ನಾಟಕ ಗೃಹ ಮಂಡಳಿಯು ಸುಮಾರು 3650 ನಿವೇಶನಗಳುಳ್ಳ ಬಡಾವಣೆಯನ್ನು ರಚಿಸಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರ ಮಾಡಿದ್ದರಿಂದ ಸದರಿ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದ ಹಾಗೂ ಜಿಲ್ಲಾಧಿಕಾರಿಗಳ ದಿನಾಂಕ:16/06/2021ರ ಆದೇಶದ ಮೇರೆಗೆ ಗ್ರಾಮ ಪಂಚಾಯಿತಿಯು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಿರುವುದರಿಂದ ಹಾಗೂ ಫಿರ್ಯಾದಿದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇದ್ದುದ್ದರಿಂದ, ಫಿರ್ಯಾದಿದಾರರಿಗೆ ಮತ್ತೊಮ್ಮೆ ಹಿಂಬರಹ ನೀಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಫಿರ್ಯಾದಿದಾರರು ಈಗ ಹೊಸದಾಗಿ ಹೂಟಗಳ್ಳಿ ನಗರಸಭೆಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ, ಫಿರ್ಯಾದಿದಾರರು ಸಲ್ಲಿಸಿದ ದೂರನ್ನು ಮುಕ್ತಾಯಗೊಳಿಸಲು ವಿನಂತಿ.

4. ಎದುರುದಾರರ ಆಕ್ಷೇಪಣೆಗಳಿಗೆ ಫಿರ್ಯಾದಿದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದ್ದು, ಫಿರ್ಯಾದಿದಾರರು ದಿನಾಂಕ:03/02/2022ರ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದ ಸಂಕ್ಷಿಪ್ತ ವಿವರವು ಈ ಕೆಳಗಿನಂತೆ ಇರುತ್ತದೆ -

ಫಿರ್ಯಾದಿದಾರರು ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸುವ ಕಾಲಕ್ಕೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸಿದ್ದಾರೆ. ಫಿರ್ಯಾದಿದಾರರು ಖಾತೆ ಬದಲಾವಣೆಗೆ ದಿನಾಂಕ:05/09/2015ರಂದು ಮತ್ತು ದಿನಾಂಕ:26/06/2019ರಂದು ಎರಡು ಬಾರಿ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅದೇ ರೀತಿ, ಫಿರ್ಯಾದಿದಾರರು ದಿನಾಂಕ:26/06/2019 ರಂದು ₹3,095/-ಗಳನ್ನು ಆಸ್ತಿ ತೆರಿಗೆ ಸಂದಾಯ ಮಾಡಿ ರಸೀದಿ ಪಡೆದಿದ್ದಾರೆ. ಎದುರುದಾರರು ಆಕ್ಷೇಪಣೆಯಲ್ಲಿ ಹೇಳಿದ ದಿನಾಂಕ:10/07/2020ರ ಹಿಂಬರಹ ಖೊಟ್ಟಿ ಇದೆ. ಸದರಿ ಹಿಂಬರಹವನ್ನು ಎದುರುದಾರರು ಫಿರ್ಯಾದಿದಾರರಿಗೆ ನೀಡಿಲ್ಲ. ಎದುರುದಾರರು ಸಂಭಾವನೆಯ ಆಸೆಗಾಗಿ ಫಿರ್ಯಾದಿದಾರರ ಖಾತೆ ಬದಲಾವಣೆ ಮಾಡದೇ ವಿಳಂಬ ಮಾಡುತ್ತಿರುತ್ತಾರೆ. ಆದ್ದರಿಂದ, ಸೂಕ್ತ ಕ್ರಮಕ್ಕಾಗಿ ಮನವಿ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಫಿರ್ಯಾದಿದಾರರು ದಿನಾಂಕ:30/04/2014ರಂದು ಕರ್ನಾಟಕ ರಾಜ್ಯ ಕಂದಾಯ ಇಲಾಖಾ ನೌಕರರ ಸಂಘದಿಂದ ಕೂರ್ಗಳ್ಳಿ ಗ್ರಾಮದ ಜಂಜರ್ ನಂ.1ರ ಖಾತೆಯ ಪಂಚಾಯಿತಿ ನಿರ್ಣಯ ಸಂಖ್ಯೆ:10/1ರ ಅನುಮೋದಿತ ನಕ್ಷೆಯ ನಿವೇಶನ ಸಂಖ್ಯೆ:91ರ ಆಸ್ತಿಯನ್ನು ಕ್ರಯಪತ್ರದ ಮೂಲಕ ಖರೀದಿಸಿರುವುದು ಕಂಡು ಬಂದಿದೆ. ಅದೇ ರೀತಿ, ಫಿರ್ಯಾದಿದಾರರು ಸದರಿ ಕ್ರಯಪತ್ರದ ಆಧಾರದಲ್ಲಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ದಿನಾಂಕ:05/09/2015ರ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ಕಂಡು ಬಂದಿದೆ. ಅದೇ ರೀತಿ, ಸದರಿ ಸನ್ 2015ರಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸದೇ ಇದ್ದುದ್ದರಿಂದ, ಫಿರ್ಯಾದಿದಾರರು ಪುನಃ ದಿನಾಂಕ:26/06/2019ರಂದು ಎರಡನೆಯ ಅರ್ಜಿಯನ್ನು ಸಲ್ಲಿಸಿ ಖಾತೆ ಬದಲಾವಣೆ ಮಾಡಲು ಕೋರಿಕೊಂಡಿರುವುದು ಕಂಡು ಬಂದಿದೆ. ಅದೇ ರೀತಿ, ದಿನಾಂಕ:26/6/2019 ರಂದೇ ಫಿರ್ಯಾದಿದಾರರು ತಮ್ಮ ನಿವೇಶನಕ್ಕೆ ಸಂಬಂಧಿಸಿದಂತೆ ₹3,095/- ಕಂದಾಯ ಸಂದಾಯ ಮಾಡಿರುವ ಬಗ್ಗೆ ಕಂಡು ಬಂದಿದೆ;

2) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಫಿರ್ಯಾದಿದಾರರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಕೋರಿ ಸಲ್ಲಿಸಿದ ಅರ್ಜಿಯೊಂದಿಗೆ ಲಗತ್ತಿಸಿದ ಮುಚ್ಚಳಿಕೆ ಪತ್ರದಲ್ಲಿ ಆಸ್ತಿ ಸಂಖ್ಯೆ ಮತ್ತು ನಿವೇಶನ ಸಂಖ್ಯೆ ನಮೂದು ಮಾಡದೇ ಇರುವುದರಿಂದ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಅನುಮೋದನೆ ಪಡೆದಿರುವ ನಕ್ಷೆಯನ್ನು ಸಲ್ಲಿಸದೇ ಇರುವುದರಿಂದ, ಹಾಗೂ ನಿವೇಶನ ಮಂಜೂರಾತಿ ಪತ್ರದಲ್ಲಿ ಕಾರ್ಯದರ್ಶಿಗಳ ಸಹಿ ಹಾಗೂ ಮೊಹರು ಇರದೇ ಇರುವುದರಿಂದ, ಸದರಿ ದಾಖಲೆಗಳನ್ನು ಸಲ್ಲಿಸುವಂತೆ ಹೇಳಲು ತಾವು ಫಿರ್ಯಾದಿದಾರರಿಗೆ ಅವರ ಮೊಬೈಲ್ ಸಂಖ್ಯೆಗೆ ಕರೆ ಮಾಡಿದಾಗ ಅವರ ಮೊಬೈಲ್ ಸಂಖ್ಯೆ ರಾಂಗ್ ನಂಬರ್ ಇರುವ ಬಗ್ಗೆ ತಿಳಿದು ಬಂದಿರುವುದರಿಂದ ಮತ್ತು ಫಿರ್ಯಾದಿದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಅವರಿಗೆ ದಿನಾಂಕ:10/07/2020ರ ಹಿಂಬರಹ ನೀಡಲಾದೆಯೆಂದು ತಿಳಿಸಿದ್ದಾರೆ;

3) ಫಿರ್ಯಾದಿದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರು ತಮಗೆ ದಿನಾಂಕ:10/07/2020ರ ಹಿಂಬರಹ ನೀಡಿರುವ ಬಗ್ಗೆ ಅಲ್ಲಗಳೆದು ಸದರಿ ಹಿಂಬರಹವನ್ನು ಎದುರುದಾರರು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುವ ಬಗ್ಗೆ ಆಪಾದಿಸಿದ್ದಾರೆ;

4) ಎದುರುದಾರರು ಫಿರ್ಯಾದಿದಾರರಿಗೆ ನೀಡಿದ್ದಾರೆನ್ನಲಾದ ದಿನಾಂಕ:10/07/2020ರ ಹಿಂಬರಹವು ಈ ಕೆಳಗಿನಂತಿದೆ –

ದಿನಾಂಕ:10/07/2020

ಹಿಂಬರಹ

ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಕೂರ್ಗಹಳ್ಳಿ ಗ್ರಾಮ ಪಂಚಾಯಿತಿ ಕೂರ್ಗಹಳ್ಳಿ ವಿಳಾಸದಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ರಾಮೇಗೌಡ s/o ಲೇ||ಬೋರೇಗೌಡ ರವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ನೀವು ಕೂರ್ಗಳ್ಳಿ ಗ್ರಾಮ ಪಂಚಾಯತಿಗೆ ದಿನಾಂಕ 26/6/19 ರಂದು ನಮೂನೆ 9/11ಎ/ 11ಬಿ/ ಖಾತೆ ~~ಬದಲಾವಣೆ~~/ ಕೋರಿ ಅರ್ಜಿ ಸಲ್ಲಿಸಿದ್ದು ಸರಿಯಷ್ಟೆ, ನಿಮ್ಮ ಅರ್ಜಿ ಜೊತೆಯಲ್ಲಿ ನೀವು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ನೀವು ಸಲ್ಲಿಸಿರುವ ದಾಖಲಾತಿಗಳಲ್ಲಿ ಇತರೆ ಸಲ್ಲಿಸದ ಹಾಗೂ ಕಂದಾಯ ಪಾವತಿಸದ ಕಾರಣ ನಿಮ್ಮ ಅರ್ಜಿಯನ್ನು ವಿಲೇ ಇಡಲಾಗಿದೆ ಎಂದು ತಿಳಿಸುವುದು.

ಗೆ
ರಾಮೇಗೌಡ /ಬಿ ಲೇ||ಬೋರೇಗೌಡ
ಚಿಕ್ಕಮರಳಿ, ಹಿರಿಮರಳಿ ಹೋಬಳಿ
ಪಾಂಡವಪುರ ತಾ||

ಸಹಿ/-
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕೂರ್ಗಳ್ಳಿ ಗ್ರಾಮ ಪಂಚಾಯಿತಿ
ಮೈಸೂರು ತಾಲ್ಲೂಕು

5) ಈ ಮೇಲಿನ ಹಿಂಬರಹವನ್ನು ಫಿರ್ಯಾದಿದಾರರು ಸ್ವೀಕರಿಸಿದ ಬಗ್ಗೆ ಸದರಿ ಹಿಂಬರಹದ ಮೇಲೆ ಫಿರ್ಯಾದಿದಾರರ ಸಹಿ ಇರುವುದಿಲ್ಲ. ಅದೇ ರೀತಿ, ಎದುರುದಾರರು ತಾವು ಫಿರ್ಯಾದಿದಾರರಿಗೆ ಹಿಂಬರಹವನ್ನು ನೋಂದಾದ ಅಂಚೆ ಮೂಲಕ ಕಳುಹಿಸಿರುವ ಬಗ್ಗೆ ತಮ್ಮ ಆಕ್ಷೇಪಣೆಯಲ್ಲಿ ವಿವರಿಸಿಲ್ಲ. ಎದುರುದಾರರು ಫಿರ್ಯಾದಿದಾರರಿಗೆ ಹಿಂಬರಹವನ್ನು ನೋಂದಾದ ಅಂಚೆ ಮೂಲಕ ಕಳುಹಿಸಿದ ಬಗ್ಗೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಎದುರುದಾರರು ಫಿರ್ಯಾದಿದಾರರಿಗೆ ದಿನಾಂಕ:10/07/2020ರ ಹಿಂಬರಹ ನೀಡಿರುತ್ತಾರೆ ಎನ್ನುವ ವಾದವನ್ನು ನಂಬಲು ಸಾಧ್ಯವಾಗುವುದಿಲ್ಲ;

6) ಅದೇ ರೀತಿ, ಈ ಮೇಲೆ ವಿವರಿಸಿದ ದಿನಾಂಕ:10/07/2020ರ ಹಿಂಬರಹದನ್ವಯ, ಎದುರುದಾರರು ಫಿರ್ಯಾದಿದಾರರಿಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸುವಂತೆ ಸೂಚಿಸಿರುವುದು ಕಂಡು ಬಂದಿರುವುದಿಲ್ಲ. ಸದರಿ ಹಿಂಬರಹವು ಅಸ್ಪಷ್ಟತೆಯಿಂದ ಕೂಡಿದೆ. ಆದ್ದರಿಂದ, ಎದುರುದಾರರು ತಾವು ಫಿರ್ಯಾದಿದಾರರಿಗೆ ಅಗತ್ಯ ದಾಖಲೆಗಳನ್ನು ಹಾಜರುಪಡಿಸುವ ಬಗ್ಗೆ ಹಿಂಬರಹ ನೀಡಿರುತ್ತಾರೆ ಎನ್ನುವ ವಾದವನ್ನು ನಂಬಲು ಸಾಧ್ಯವಾಗುವುದಿಲ್ಲ. ಅದೇ ರೀತಿ, ಈ ಮೇಲಿನ ಹಿಂಬರಹದಲ್ಲಿ, ಕಂದಾಯ ಪಾವತಿಸದ ಕಾರಣ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸದ ಕಾರಣ ಫಿರ್ಯಾದಿದಾರರ ಅರ್ಜಿಯನ್ನು ವಿಲೇ ಇಡಲಾಗಿದೆಯೆಂದು ತಿಳಿಸಲಾಗಿದೆ. ಆದರೆ, ಕಡತದಲ್ಲಿ ಲಭ್ಯವಿದ್ದ ಕಂದಾಯ ರಸೀದಿಯಿಂದ ಫಿರ್ಯಾದಿದಾರರು ತಾವು ಅರ್ಜಿ ಸಲ್ಲಿಸಿದ ದಿನದಂದೇ ಕಂದಾಯ ಪಾವತಿಸಿರುವುದು ಕಂಡು ಬಂದಿದೆ. ಆದ್ದರಿಂದ, ಫಿರ್ಯಾದಿದಾರರು ಕಂದಾಯ ಸಂದಾಯ ಮಾಡದೇ ಇದ್ದ ಕಾರಣಕ್ಕೆ ಅವರ ಅರ್ಜಿ ವಿಲೇ ಇಡಲಾಗಿದೆಯೆನ್ನುವ ಎದುರುದಾರರ ಹಿಂಬರಹದ ಅಂಶವನ್ನು ನಂಬಲು ಆಗುವುದಿಲ್ಲ. ಅದೇ ರೀತಿ, ಸದರಿ ಈ ಮೇಲಿನ ಹಿಂಬರಹದಲ್ಲಿ ಇತರೆ ದಾಖಲೆಗಳನ್ನು ಹಾಜರುಪಡಿಸದೇ ಇದ್ದ ಕಾರಣಕ್ಕೆ ಅರ್ಜಿ ವಿಲೇ ಇಡಲಾಗಿದೆಯೆಂದು ತಿಳಿಸಲಾಗಿದೆ. ಆದರೆ, ಯಾವ ನಿರ್ಧಿಷ್ಟ ದಾಖಲೆಗಳನ್ನು ಹಾಜರುಪಡಿಸದೇ ಇರುವುದಕ್ಕೆ ಅರ್ಜಿ ವಿಲೇ ಇಡಲಾಗಿದೆ ಎನ್ನುವುದರ ಬಗ್ಗೆ ಹಿಂಬರಹದಲ್ಲಿ ಸ್ಪಷ್ಟವಾಗಿ ನಮೂದಿಸಿಲ್ಲ. ಆದ್ದರಿಂದ, ಈ ಮೇಲಿನ ಹಿಂಬರಹದ ಅಂಶಗಳನ್ನು ನಂಬಲು ಸಾಧ್ಯವಾಗುವುದಿಲ್ಲ;

7) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಫಿರ್ಯಾದಿದಾರರು ಖಾತೆ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ ಅವಧಿಯಲ್ಲಿಯೇ ಕರ್ನಾಟಕ ಗೃಹ ಮಂಡಳಿಯಿಂದ ನಿರ್ಮಿಸಿದ ಬಡಾವಣೆಯನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಿದ್ದರಿಂದ ಹಾಗೂ ಗ್ರಾಮ ಪಂಚಾಯಿತಿಯು ನಗರಸಭೆಗೆ ಮೇಲ್ದರ್ಜೆ ಹೊಂದಿದ್ದರಿಂದ ಹಾಗೂ ಆ ವಿಷಯವಾಗಿ ಪ್ರಭಾರ ಹಸ್ತಾಂತರಗೊಳಿಸುವ ಕಾರ್ಯದೊತ್ತಡದಿಂದಾಗಿ ಫಿರ್ಯಾದಿದಾರರಿಗೆ ಮತ್ತೊಮ್ಮೆ ಹಿಂಬರಹ ನೀಡಲು ಸಾಧ್ಯವಾಗಿರುವುದಿಲ್ಲವೆಂದು ವಾದಿಸಿದ್ದಾರೆ. ಆದರೆ, ಎದುರುದಾರರು

ತಮ್ಮ ಆಕ್ಷೇಪಣೆಯಲ್ಲಿ ಒಂದು ಕಡೆ ತಾವು ಫಿರ್ಯಾದಿದಾರರಿಗೆ ದಿನಾಂಕ:10/07/2020ರ ಹಿಂಬರಹ ನೀಡಿರುವ ಬಗ್ಗೆ ಹೇಳಿ ಇನ್ನೊಂದು ಕಡೆ ತಾವು ಫಿರ್ಯಾದಿದಾರರಿಗೆ ಇನ್ನೊಮ್ಮೆ ಹಿಂಬರಹ ನೀಡಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿದ್ದಾರೆ. ಯಾವ ವಿಷಯಕ್ಕೆ ಸಂಬಂಧವಾಗಿ ತಾವು ಫಿರ್ಯಾದಿದಾರರಿಗೆ ಮತ್ತೊಮ್ಮೆ ಹಿಂಬರಹ ನೀಡಲು ಸಾಧ್ಯವಾಗಿಲ್ಲವೆಂದು ಸ್ಪಷ್ಟವಾಗಿ ವಿವರಿಸಿಲ್ಲ. ಎದುರುದಾರರ ಈ ವಾದಗಳಿಂದ ಅವರು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿರುವುದು ಕಂಡು ಬಂದಿದೆ;

8) ಫಿರ್ಯಾದಿದಾರರು ಕ್ರಯಪತ್ರದ ಆಧಾರದಲ್ಲಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ ಬಳಿಕ ಎದುರುದಾರರು ಸದರಿ ಅರ್ಜಿಯನ್ನು ಪರಿಶೀಲಿಸಿ ಖಾತೆ ಬದಲಾವಣೆಗಾಗಿ ಸೂಕ್ತ ಕ್ರಮ ಕೈಗೊಳ್ಳುವ ಕರ್ತವ್ಯವನ್ನು ಹೊಂದಿದ್ದಾರೆ. ಒಂದು ವೇಳೆ, ಫಿರ್ಯಾದಿದಾರರು ತಮ್ಮ ಅರ್ಜಿಯೊಂದಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ, ಅಂಥಹ ಅಗತ್ಯ ದಾಖಲೆಗಳನ್ನು ಹಾಜರುಪಡಿಸುವಂತೆ ಎದುರುದಾರರು ಫಿರ್ಯಾದಿದಾರರಿಗೆ ನೋಟೀಸ್ ನೀಡಬೇಕಾಗಿದೆ. ಅಂಥಹ ನೋಟೀಸ್ ನೀಡಿದ ಬಳಿಕವೂ ಕೂಡ ಫಿರ್ಯಾದಿದಾರರು ಅಗತ್ಯ ದಾಖಲೆಗಳನ್ನು ಹಾಜರುಪಡಿಸದಿದ್ದಲ್ಲಿ, ಎದುರುದಾರರು ಆ ಬಗ್ಗೆ ಫಿರ್ಯಾದಿದಾರರಿಗೆ ಸೂಕ್ತ ಹಿಂಬರಹ ನೀಡಿ ಅವರ ಅರ್ಜಿಯನ್ನು ವಿಲೇಗೆ ಇಡಬೇಕಾಗಿದೆ. ಆದರೆ, ಎದುರುದಾರರು ಫಿರ್ಯಾದಿದಾರರಿಗೆ ಅಗತ್ಯ ದಾಖಲೆಗಳನ್ನು ಹಾಜರುಪಡಿಸುವಂತೆ ಯಾವುದೇ ನೋಟೀಸ್ ನೀಡಿಲ್ಲ. ಅದೇ ರೀತಿ, ಎದುರುದಾರರು ಫಿರ್ಯಾದಿದಾರರಿಗೆ ಯಾವುದೇ ಸೂಕ್ತ ಹಿಂಬರಹ ಕೂಡ ನೀಡಿಲ್ಲ. ಆದ್ದರಿಂದ, ಎದುರುದಾರರು ಫಿರ್ಯಾದಿದಾರರಿಗೆ ಅಗತ್ಯ ದಾಖಲೆಗಳನ್ನು ಹಾಜರುಪಡಿಸುವಂತೆ ನೋಟೀಸ್ ನೀಡದೇ ಹಾಗೂ ಸೂಕ್ತ ಹಿಂಬರಹ ನೀಡದೇ ಅವರ ದಿನಾಂಕ:26/06/2019ರ ಅರ್ಜಿಯ ಮೇಲೆ ಈವರೆಗೆ ಯಾವುದೇ ಕ್ರಮ ಜರುಗಿಸದೇ ವಿಳಂಬ ಮಾಡಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

9) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಗ್ರಾಮ ಪಂಚಾಯಿತಿಯು ನಗರಸಭೆಗೆ ಮೇಲ್ದರ್ಜೆ ಹೊಂದಿರುವುದರಿಂದ ಹಾಗೂ ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ನಗರಸಭೆಗೆ ಹಸ್ತಾಂತರಿಸಿದ್ದರಿಂದ, ಫಿರ್ಯಾದಿದಾರರು ನಗರಸಭೆಗೆ ಖಾತೆ ಬದಲಾವಣೆಗೆ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆಂದು ವಾದಿಸಿದ್ದಾರೆ;

10) ಗ್ರಾಮ ಪಂಚಾಯಿತಿಯು ನಗರಸಭೆಗೆ ಮೇಲ್ದರ್ಜೆ ಹೊಂದುವ ಮುಂಚೆ ಫಿರ್ಯಾದಿದಾರರು ತಮ್ಮ ನಿವೇಶನಕ್ಕೆ ಸಂಬಂಧವಾಗಿ ಖಾತೆ ಬದಲಾವಣೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಸದರಿ ಅರ್ಜಿಯ ಮೇಲೆ ಗ್ರಾಮ ಪಂಚಾಯಿತಿಯು ಯಾವುದೇ ಸೂಕ್ತ ಕ್ರಮವನ್ನು ಕೈಗೊಂಡಿರುವುದಿಲ್ಲ. ಈಗ ಗ್ರಾಮ ಪಂಚಾಯಿತಿಯು ನಗರಸಭೆಗೆ ಮೇಲ್ದರ್ಜೆ ಹೊಂದಿರುವುದರಿಂದ ಹಾಗೂ ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ನಗರಸಭೆಗೆ

ವರ್ಗಾಯಿಸಿರುವುದರಿಂದ, ನಗರಸಭೆಯು ಸದರಿ ಈ ಹಿಂದಿನ ಫಿರ್ಯಾದಿದಾರರ ಅರ್ಜಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ;

11) ಆದ್ದರಿಂದ, ಈ ಮೇಲೆ ವಿವರಿಸಿದ ಎಲ್ಲಾ ಕಾರಣಗಳಾಗಿ, ಎದುರುದಾರರು ಫಿರ್ಯಾದಿದಾರರ ಖಾತಾ ಬದಲಾವಣೆಯ ಅರ್ಜಿಯ ಮೇಲೆ ಯಾವುದೇ ಸೂಕ್ತ ಕ್ರಮ ಕೈಗೊಳ್ಳದೇ ವಿಳಂಬ ಧೋರಣೆ ಅನುಸರಿಸಿ ಫಿರ್ಯಾದಿದಾರರಿಗೆ ತೊಂದರೆ ನೀಡಿ ಅಕ್ರಮ ಎಸಗಿ ದುರ್ನಡತೆಯಿಂದ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಫಿರ್ಯಾದಿದಾರರ ನಿವೇಶನದ ಖಾತಾ ಬದಲಾವಣೆಯ ಅರ್ಜಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು **ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಶಿಫಾರಸ್ಸು ಮಾಡಲಾಗಿದೆ.

01/7/22

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.